**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.779/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾ. ನಾಗಸಿಂಹ ಎಸ್. | ಫ್ರಾಸಾ-7 |
| ತಂದೆಯ ಹೆಸರು | : ವೇಣುಗೋಪಾಲ್ ಎಸ್. | ಚಾಸಾ-8 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವೈದ್ಯಾಧಿಕಾರಿ | ದಿನಾಂಕಃ 05.08.2026. |
| ವಾಸಸ್ಥಳ | : ಮೂಡಿಗೆರೆ ಸರ್ಕಾರಿ ಆಸ್ಪತ್ರೆ. | |

**:ಮುಖ್ಯ ವಿಚಾರಣೆಃ ಫ್ರಾಷ್ಟ್ಯಾ.ಸ.ಸ.ಅ. ರವರಿಂದ:**

ನಾನು ಜೂನ್ 2021 ರಿಂದ ಇಲ್ಲಿಯವರೆಗೂ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.19.11.2021 ರಂದು ಸಂಜೆ 5.20 ಸಮಯಕ್ಕೆ ಚಾಸಾ-1 ಜಯ, ಚಾಸಾ-2 ಅನನ್ಯ ರವರು ಚಿಕಿತ್ಸೆಗೆಂದು ಆಸ್ಪತ್ರೆಗೆ ಹಲ್ಲೆ ಕಾರಣ ಹಾಜರಾಗಿದ್ದು, ಅವರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿದ್ದು, ಚಾಸಾ-1 ರವರಿಗೆ ಈ ಕೆಳಕಂಡ ಗಾಯಗಳು ಕಂಡಂದಿರುತ್ತದೆ.

1. ಎಡ ಕೈ ಬಲಭಾಗದ ತೋಳಿನಲ್ಲಿ ರಕ್ತ ಹೆಪ್ಪುಗಟ್ಟಿದ ಗಾಯ 4X3 ಇಂಚು ಸೆಂಟಿಮೀಟರ್. ಎಡಭಾಗದಲ್ಲಿ 3X2 ಸೆಂಟಿಮೀಟರ ಗಾಯವಾಗಿರುತ್ತದೆ.

2. ಚಾಸಾ-2 ಅನನ್ಯರವರಿಗೆ ಯಾವುದೇ ಗಾಯಗಳು ಕಂಡುಬಂದಿರುವುದಿಲ್ಲ.

ಮೇಲೆ ಹೇಳಿದಂತೆ ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ.

ಸಾಕ್ಷಿಯು ನಿಪಿ-8 ಮತ್ತು 9 ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಮತ್ತು 9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪೊಲೀಸರು ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-10, ಸಾಕ್ಷಿಯು ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎಂ.ಒ.2 ಮತ್ತು 3 ರಲ್ಲಿ ಹಲ್ಲೆ ಮಾಡಿದ್ದರೇ ಮೇಲೆ ಹೇಳಿದ ಗಾಯವಾಗುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಚಾಸಾ-1 ಮತ್ತು 2 ರವರು ಯಾರು ಹಲ್ಲೆ ಮಾಡಿರುತ್ತಾರೆ, ಯಾವ ಊರಿನಲ್ಲಿ ಎಂದು ತಿಳಿಸಿರುತ್ತಾರೆ ಎಂದು ನನಗೆ ತಿಳಿಸಿಲ್ಲ ಎಂದರೆ ಸರಿ ಮತ್ತು ದೊಣ್ಣೆಗಳಿಂದಲೂ ಹಲ್ಲೆ ಮಾಡಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿ.

2. ಗಾಯದ ವಯಸ್ಸನ್ನು ನಿಪಿ-8 ಮತ್ತು 9 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಮಾನ್ಯವಾಗಿ

3. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಜಾರಿ ಬಿದ್ದಾಗಲು ನಿಪಿ-8 ರಲ್ಲಿ ಈ ರೀತಿ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ.

4. ಚಾಸಾ-1 ಮತ್ತು 2 ರವರು ನಿಮ್ಮ ಬಳಿ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

5. ನೀವು ಪೋಲಿಸರ ಮಾತನ್ನು ಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.